ಕರ್ನಾಟಕ ಸರ್ಕಾರ
ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-12.
E-mail:Commissioner.pue@gmail.com. * Ph. No.23361857, 23361858* Fax-23361852

ಸಂಖ್ಯೆ: ಶೈಶಾ-01/ಉ.ಉ.ಪ್ರಾ ಆ/2/2018-19 ದಿನಾಂಕ: 18-08-2018

# ಸುತ್ತೋಲೆ

**ವಿಷಯ:** 2017-18ನೇ ಶೈಕ್ಷಣಿಕ ಸಾಲಿಗೆ ಸರ್ಕಾರಿ / ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಉತ್ತಮ ಉಪನ್ಯಾಸಕರು/ಪ್ರಾಂಶುಪಾಲರ ಪ್ರಶಸ್ತಿಗಾಗಿ ಆಯ್ಕೆ ಮಾಡಲು ಅರ್ಹ ಉಪನ್ಯಾಸಕರು/ಪ್ರಾಂಶುಪಾಲರ ಪಟ್ಟಿಯನ್ನು ನೀಡಲು ಕೋರಿ.

* * *

ರಾಜ್ಯದ ಪದವಿ ಪೂರ್ವ ಶಿಕ್ಷಣ ಇಲಾಖೆಯು ಪ್ರಥಮ ಮತ್ತು ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣವನ್ನು ನೀಡುತ್ತಾ ಬಂದಿರುತ್ತದೆ. ಪದವಿ ಪೂರ್ವ ಶಿಕ್ಷಣವು ವಿದ್ಯಾರ್ಥಿಗಳಿಗೆ ಬಹಳ ಪ್ರಮುಖ ಘಟ್ಟವಾಗಿರುತ್ತದೆ. ಈ ಹಂತದಲ್ಲಿ ವಿದ್ಯಾರ್ಥಿಗಳ ಮುಂದಿನ ಭವಿಷ್ಯವನ್ನು ರೂಪಿಸುವ ಅತೀ ಮುಖ್ಯವಾದ ಪಾತ್ರವನ್ನು ಉಪನ್ಯಾಸಕರು/ಪ್ರಾಂಶುಪಾಲರ ವಹಿಸಿಕೊಂಡಿರುತ್ತಾರೆ. ರಾಜ್ಯದಲ್ಲಿ ಸುಮಾರು ಹನ್ನೆರಡು ಲಕ್ಷಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಪ್ರಥಮ ಹಾಗೂ ದ್ವಿತೀಯ ಪಿಯುಸಿಯಲ್ಲಿ ವಿದ್ಯಾರ್ಥಿಗಳು ವಿದ್ಯಾರ್ಜನೆ ಮಾಡುತ್ತಿದ್ದಾರೆ. ಈ ವಿದ್ಯಾರ್ಥಿಗಳ ಹಿತವನ್ನು ಸದಾ ಬಯಸುವದರೊಂದಿಗೆ ಅವರ ಮುಂದಿನ ಭವಿಷ್ಯವನ್ನು ರೂಪಿಸಿಕೊಳ್ಳುವ ದೃಷ್ಟಿಯಿಂದ ಉತ್ತಮ ಮಾರ್ಗದರ್ಶನ ನೀಡುತ್ತಿರುವ ಉಪನ್ಯಾಸಕರನ್ನು/ ಪ್ರಾಂಶುಪಾಲರನ್ನು ಗುರುತಿಸಿ ಗೌರವಿಸುವ ಮೂಲಕ ಪ್ರೋತ್ಸಾಹಿಸುವುದು ಸರ್ಕಾರದ/ಇಲಾಖೆಯ ಆಶಯವಾಗಿವೆ.

ಈ ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರವು 2017-18ನೇ ಶೈಕ್ಷಣಿಕ ಸಾಲಿಗೆ ಪದವಿ ಪೂರ್ವ ಶಿಕ್ಷಣ ಹಂತದಲ್ಲಿ ಸರ್ಕಾರಿ/ ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ಬೋಧಿಸುತ್ತಿರುವ ಉಪನ್ಯಾಸಕರಾಗಿ/ಉತ್ತಮ ಆಡಳಿತ ನಿರ್ವಹಿಸುತ್ತಿರುವ ಪ್ರಾಂಶುಪಾಲರಿಗೆ **"ಉತ್ತಮ ಉಪನ್ಯಾಸಕರು ಮತ್ತು ಉತ್ತಮ ಪ್ರಾಂಶುಪಾಲರು"** ಪ್ರಶಸ್ತಿಯನ್ನು ನೀಡಲು ಉದ್ದೇಶಿಸಲಾಗಿದೆ. ಈ ಪ್ರಶಸ್ತಿ ಪ್ರದಾನ ಕಾರ್ಯಕ್ರಮವನ್ನು ಪ್ರತಿ ವರ್ಷ ಶಿಕ್ಷಕರ ದಿನಾಚರಣೆ ದಿನದಂದು ನಡೆಸಲು ಸರ್ಕಾರವು ತೀರ್ಮಾನಿಸಿದೆ.

ಆದ್ದರಿಂದ ತಮ್ಮ ಜಿಲ್ಲೆಯಿಂದ ಸರ್ಕಾರಿ/ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ ಉಪನ್ಯಾಸಕರನ್ನು/ಪ್ರಾಂಶುಪಾಲರನ್ನು ಗುರುತಿಸುವ ಗುರುತರ ಜವಾಬ್ದಾರಿ ತಮ್ಮ ಮೇಲೆ ಇದೆ. ಯಾವುದೇ ಕಾರಣಕ್ಕೂ ಯಾವುದೇ ರೀತಿಯ ಸಂಶಯಗಳಿಗೆ ಅವಕಾಶ ನೀಡದೆ ಎಚ್ಚರ ವಹಿಸಿ ಈ ಕೆಳಕಂಡ ಮಾನದಂಡಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ ಆಯ್ಕೆ ಮಾಡಿ ಕಾಲಮಿತಿ ಒಳಗೆ ಇಲಾಖೆಗೆ ಸಲ್ಲಿಸಲು ಸೂಚಿಸಿದೆ.

ಆ. ಪ್ರಾಚಾರ್ಯರ/ಉಪನ್ಯಾಸಕರ ಪ್ರಶಸ್ತಿಗೆ ಅರ್ಜಿ ಸಲ್ಲಿಸಲು ಸೂಚನೆಗಳು/ಮಾನದಂಡಗಳು

ವಿವಿಧ ಸಾಧನೆಗಳಿಗೆ ಸಂಬಂಧಿಸಿದಂತೆ ವರದಿಯನ್ನು /ದಾಖಲೆಗಳನ್ನು ಚೆಕ್‌ಲಿಸ್ಟ್‌ನಂತೆ ಲಗತ್ತಿಸಿರಬೇಕು.

1. ದಿನಾಂಕ 31-03-2018 ಕ್ಕೆ ಕನಿಷ್ಟ 10 ವರ್ಷಗಳ ಬೋಧನಾ ಅನುಭವ ಹೊಂದಿರಬೇಕು.
2. ಪ್ರತಿ ಜಿಲ್ಲೆಯಿಂದ ಒಬ್ಬರು ಪ್ರಾಚಾರ್ಯರನ್ನು ಆಯ್ಕೆಮಾಡಿ ಕಳುಹಿಸುವುದು.
3. ದಿನಾಂಕ 31-03-2018ಕ್ಕೆ ಕನಿಷ್ಟ 03 ವರ್ಷಗಳ ಉತ್ತಮ ಆಡಳಿತ ನಿರ್ವಹಿಸಿರುವ ಅನುಭವ ಪ್ರಾಚಾರ್ಯರಿಗಿರಬೇಕು.
4. ಆಯ್ಕೆಯಾದ ಉಪನ್ಯಾಸಕರ/ಪ್ರಾಚಾರ್ಯರ ಕಾಲೇಜಿನಲ್ಲಿ ದ್ವಿತೀಯ ಪಿಯುಸಿಯಲ್ಲಿ ಕಳೆದ 05 ವರ್ಷಗಳಿಂದ 40 ವಿದ್ಯಾರ್ಥಿಗಳಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಪರೀಕ್ಷೆಗೆ ಹಾಜರಾಗಿ ಫಲಿತಾಂಶ ಶೇ.75 ಕ್ಕಿಂತಲೂ ಹೆಚ್ಚಿರಬೇಕು(ಎಲ್ಲಾ ಪೂರಕ ದಾಖಲೆಗಳೊಂದಿಗೆ).
5. ಹಿಂದಿನ ಯಾವುದೇ ವರ್ಷಗಳಲ್ಲಿ ಸದರಿ ಪ್ರಶಸ್ತಿ ಪಡೆದ ಪ್ರಾಚಾರ್ಯರು/ಉಪನ್ಯಾಸಕರು ಈ ಸಾಲಿನ ಪ್ರಶಸ್ತಿಗೆ ಅರ್ಹರಿರುವುದಿಲ್ಲ.
6. ಅರ್ಜಿಯೊಂದಿಗೆ ಪ್ರತ್ಯೇಕವಾಗಿ 04 ಪಾಸ್‌ಪೋರ್ಟ್ ಸೈಜಿನ ಭಾವ ಚಿತ್ರಗಳನ್ನು ಹಿಂಬದಿಯಲ್ಲಿ ಹೆಸರು ಬರೆದು ಕಡ್ಡಾಯವಾಗಿ ಸಲ್ಲಿಸಬೇಕು.
7. ಉಪನ್ಯಾಸಕರ/ಪ್ರಾಚಾರ್ಯರು ಯಾವುದೇ ಶಿಸ್ತು ಕ್ರಮಕ್ಕೆ ಒಳಗಾಗಿ ದಂಡನೆ ಅವಧಿಯಲ್ಲಿ ಇದ್ದಲ್ಲಿ ಅಂತಹ ಅರ್ಜಿಗಳನ್ನು ಉಪನಿರ್ದೇಶಕರು ತಿರಸ್ಕರಿಸುವುದು.
8. ಯಾವುದೇ ಶಿಫಾರಸ್ಸು ಪತ್ರಗಳನ್ನು ಪರಿಗಣಿಸುವುದಿಲ್ಲ. ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
9. **ಆಯ್ಕೆ ಸಮಿತಿ ತೀರ್ಮಾನವೇ ಅಂತಿಮ ತೀರ್ಮಾನವಾಗಿರುತ್ತದೆ.**
10. ಸದರಿ ಅವಧಿಯಲ್ಲಿ ಸಾರ್ವಜನಿಕರಿಂದ/ದಾನಿಗಳಿಂದ ಕಾಲೇಜಿನ ಅಭಿವೃದ್ಧಿಗೆ ಸಹಕಾರ

| ಕ್ರ ಸಂ | ವರ್ಷ | ವಿವರ | ಅಂದಾಜು ಮೌಲ್ಯ |
|---|---|---|---|
| 1 | | ಪೀಠೋಪಕರಣ | |
| 2 | | ಕೊಠಡಿ ನಿರ್ಮಾಣ | |
| 3 | | ಪ್ರಯೋಗಾಲಯಗಳ ಉನ್ನತೀಕರಣ | |
| 4 | | ಗ್ರಂಥಾಲಯಕ್ಕೆ ಪುಸ್ತಕಗಳ ಸಂಗ್ರಹ | |
| 5 | | ಇತರೆ ಅಭಿವೃದ್ಧಿ ಸೌಕರ್ಯಗಳು | |

11. ಸದರಿ ಅವಧಿಯಲ್ಲಿನ ಪಠ್ಯೇತರ ಚಟುವಟಿಕೆಗಳಲ್ಲಿನ ಸಾಧನೆ

| ಕ್ರ ಸಂ | ಚಟುವಟಿಕೆಗಳ ವಿವರ | ರಾಜ್ಯಮಟ್ಟ | ರಾಷ್ಟ್ರಮಟ್ಟ | ಅಂತರರಾಷ್ಟ್ರೀಯ ಮಟ್ಟ |
|---|---|---|---|---|
| 1 | ಕ್ರೀಡೆ | | | |
| 2 | ಸಾಂಸ್ಕೃತಿಕ ಚಟುವಟಿಕೆಗಳು | | | |
| 3 | ಎನ್‌ಸಿಸಿ | | | |
| 4 | ಎನ್‌ಎಸ್ ಎಸ್ | | | |
| 5 | ಹಸಿರು ಪಡೆ | | | |
| 6 | ಇತರೆ ಚಟುವಟಿಕೆಗಳ | | | |

12. ಕಾಲೇಜಿನ ವಿದ್ಯಾರ್ಥಿಗಳ ಜ್ಞಾನಾಭಿವೃದ್ಧಿಗಾಗಿ ಹಮ್ಮಿಕೊಂಡಿರುವ ವಿಶೇಷ ಕಾರ್ಯಯೋಜನೆಗಳು:

| ಕ್ರ ಸಂ | ವಿಷಯ | ವಿಶೇಷ ಕಾರ್ಯಯೋಜನೆಗಳು | ಉಪಯುಕ್ತತೆ |
|---|---|---|---|
| | | | |
| | | | |
| | | | |

ಆ. ಉಪನ್ಯಾಸಕರ ಪ್ರಶಸ್ತಿಗೆ ಪ್ರಸ್ತಾವನೆ ಸಲ್ಲಿಸಲು ಸೂಚನೆಗಳು/ಮಾನದಂಡಗಳು:

1. ಪ್ರಸ್ತಾವನೆ ಸಲ್ಲಿಸಲು ದಿ: 31.03.2018 ಕ್ಕೆ ಕನಿಷ್ಠ 10 ವರ್ಷಗಳ ಬೋಧನಾ ಅನುಭವ ಹೊಂದಿರಬೇಕು
2. ಪ್ರತಿ ಜಿಲ್ಲೆಯಿಂದ ಐದು ಜನ(05) ಉಪನ್ಯಾಸಕರನ್ನು ಈ ಕೆಳಕಂಡಂತೆ ಆಯ್ಕೆ ಮಾಡಿ ಕಳುಹಿಸಿಕೊಡಬೇಕು

    i. ಕನ್ನಡ ಭಾಷೆ – 01
    ii. ಆಂಗ್ಲ ಹಾಗೂ ಇತರೆ ಭಾಷೆಗಳಿಂದ – 01
    iii. ಕಲಾ ವಿಭಾಗ – 01
    iv. ವಿಜ್ಞಾನ ವಿಭಾಗ – 01
    v. ವಾಣಿಜ್ಯ ವಿಭಾಗ – 01

3. ನಿರಂತರ ಕಳೆದ 5 ವರ್ಷಗಳಿಂದ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಕನಿಷ್ಠ 40 ವಿದ್ಯಾರ್ಥಿಗಳು ಹಾಜರಾಗಿ ಶೇಕಡ 80 ಕ್ಕಿಂತಲು ಹೆಚ್ಚಿನ ಫಲಿತಾಂಶವಿರಬೇಕು ಎಲ್ಲಾ ಪೂರಕ ದಾಖಲೆಗಳೊಂದಿಗೆ
4. ಈಗಾಗಲೇ ಸದರಿ ಪ್ರಶಸ್ತಿ ಪಡೆದ ಉಪನ್ಯಾಸಕರನ್ನು ಪರಿಗಣಿಸಬಾರದು

5. ನಾಲ್ಕು ಪಾಸ್‌ಪೋರ್ಟ್ ಸೈಜಿನ ಭಾವ ಚಿತ್ರಗಳನ್ನು ಹಿಂಬದಿಯಲ್ಲಿ ಹೆಸರು ಬರೆದು ಕಡ್ಡಾಯವಾಗಿ ಸಲ್ಲಿಸಬೇಕು

6. ಉಪನ್ಯಾಸಕರು ಯಾವುದೇ ಇಲಾಖಾ ವಿಚಾರಣೆಗೆ ಒಳಪಟ್ಟು, ಶಿಸ್ತು ಕ್ರಮಕ್ಕೆ ಒಳಗಾಗಿದ್ದರೆ ಅಂತಹ ಪ್ರಸ್ತಾವನೆಗಳನ್ನು ತಿರಸ್ಕರಿಸುವುದು

7. ಯಾವುದೇ ಪ್ರಸ್ತಾವನೆಗೆ ಶಿಫಾರಸ್ಸು ಪತ್ರಗಳನ್ನು ಪರಿಗಣಿಸಬಾರದು

**8. ಆಯ್ಕೆ ಸಮಿತಿ ತೀರ್ಮಾನವೇ ಅಂತಿಮ ತೀರ್ಮಾನವಾಗಿರುತ್ತದೆ.**

9. ತರಗತಿಯಲ್ಲಿ ತಮ್ಮ ವಿಷಯದ ಬೋಧನೆಗಾಗಿ ಹಮ್ಮಿಕೊಂಡಿರುವ ವಿಶೇಷ ಕಾರ್ಯಯೋಜನೆಗಳು ಮತ್ತು ನೂತನ ಪ್ರಯೋಗಗಳ ವಿವರಗಳನ್ನು ಈ ಕೆಳಕಂಡಂತೆ ನೀಡಬೇಕು.

| ಕ್ರ ಸಂ | ವಿಷಯ | ವಿಶೇಷ ಕಾರ್ಯಯೋಜನೆಗಳು | ಉಪಯುಕ್ತತೆ |
|---|---|---|---|
| | | | |
| | | | |
| | | | |
| ಕ್ರ ಸಂ | ವಿಷಯ | ಬೋಧನೆಯಲ್ಲಿ ನೂತನ ಪ್ರಯೋಗದ ಸಂಕ್ಷಿಪ್ತ ವಿವರಣೆ | ಉಪಯುಕ್ತತೆ |
| | | | |
| | | | |

10. ಸದರಿ ಅವಧಿಯಲ್ಲಿನ ಪಠ್ಯೇತರ ಚಟುವಟಿಕೆಗಳಲ್ಲಿನ ಸಾಧನೆ

| ಕ್ರ ಸಂ | ಚಟುವಟಿಕೆಗಳ ವಿವರ | ರಾಜ್ಯಮಟ್ಟ | ರಾಷ್ಟ್ರ ಮಟ್ಟ | ಅಂತಾರಾಷ್ಟ್ರೀಯ ಮಟ್ಟ |
|---|---|---|---|---|
| | | | | |
| | | | | |
| | | | | |
| | | | | |
| | | | | |
| | | | | |

. ಮೇಲಿನ ಎಲ್ಲಾ ಸೂಚನೆ/ ಮಾನದಂಡಗಳನ್ನು ಗಮನದಲ್ಲಿಟ್ಟುಕೊಂಡು 100 ಅಂಕಗಳಿಗೆ ಮೌಲ್ಯಮಾಪನ ಮಾಡಲು ತಿಳಿಸಿದೆ. ಇದಕ್ಕಾಗಿ ಉಪನಿರ್ದೇಶಕರು ತಮ್ಮ ನೇತೃತ್ವದಲ್ಲಿ ಆಯಾ ಜಿಲ್ಲೆಯ ಸರ್ಕಾರಿ/ಅನುದಾನಿತ

ಪದವಿ ಪೂರ್ವ ಕಾಲೇಜುಗಳ ಹಿರಿಯ ಇಬ್ಬರು ಪ್ರಾಂಶುಪಾಲರು ಹಾಗೂ ಇಬ್ಬರು ಹಿರಿಯ ಉಪನ್ಯಾಸಕರುಗಳನ್ನೊಳಗೊಂಡ ಸಮಿತಿಯಲ್ಲಿ ಇಬ್ಬರು ಮಹಿಳಾ ಸದಸ್ಯರನ್ನು ಹೊಂದಿರಬೇಕು ಈ ಸಮಿತಿಯು ಜಾಗರೂಕತೆಯಿಂದ ಮೇಲೆ ಸೂಚಿಸಿರುವಂತೆ ಸಂಯೋಜನೆ/ವಿಷಯಗಳಲ್ಲಿ ತಲಾ ಒಬ್ಬರಂತೆ 05 ಉಪನ್ಯಾಸಕರನ್ನು ಹಾಗೂ ಒಬ್ಬರು ಪ್ರಾಂಶುಪಾಲರನ್ನು ನ್ಯಾಯಸಮ್ಮತವಾದ ಆಯ್ಕೆ ಮಾಡಿ Short list ಪಟ್ಟಿ ಸಿದ್ಧಪಡಿಸಬೇಕು. ಜಿಲ್ಲಾ ಉಪ ನಿರ್ದೇಶಕರ ಹಂತದಲ್ಲಿ ಪಟ್ಟಿಯನ್ನು ಅಂತಿಮಗೊಳಿಸಬೇಕಾದ ದಿನಾಂಕ:25.08.2018 ಆಗಿರುತ್ತದೆ. ನಿಮ್ಮ ಆಯ್ಕೆಯನ್ನು ಸಮರ್ಥಿಸಿ ಪ್ರತಿಯೊಬ್ಬ ಉತ್ತಮ ಉಪನ್ಯಾಸಕ/ಪ್ರಾಂಶುಪಾಲರ ಬಗ್ಗೆ 100 ಶಬ್ದಗಳಲ್ಲಿ ಪ್ರತ್ಯೇಕ ವರದಿಯನ್ನು ಕಡ್ಡಾಯವಾಗಿ ಪಟ್ಟಿಯ ಜೊತೆಯಲ್ಲಿ ಕಳುಹಿಸಬೇಕು.

ಯಾವುದೇ ಜಿಲ್ಲೆಯ ಸರ್ಕಾರಿ/ಅನುದಾನಿತ ಕಾಲೇಜಿನಲ್ಲಿ ಉಪನ್ಯಾಸಕರಾಗಲಿ ಹಾಗೂ ಪ್ರಾಂಶುಪಾಲರಾಗಲಿ ಪ್ರಸ್ತಾವನೆ ಸಲ್ಲಿಸಿದಿದ್ದ ಪಕ್ಷದಲ್ಲಿ, ಜಿಲ್ಲಾ ಉಪನಿರ್ದೇಶಕರು ಶೂನ್ಯ ವರದಿ ಸಲ್ಲಿಸುವುದು ಕಡ್ಡಾಯವಾಗಿರುತ್ತದೆ. ಸದರಿ ಪಟ್ಟಿಯನ್ನು ದಿನಾಂಕ: **28-08-2018** ರೊಳಗೆ ಅತಿ ಜರೂರಾಗಿ ಜಂಟಿ ನಿರ್ದೇಶಕರು(ಶೈಕ್ಷಣಿಕ), ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-12 ಇವರಿಗೆ ಖುದ್ದಾಗಿ ತಲುಪಿಸಲು ಈ ಮೂಲಕ ಸೂಚಿಸಿದೆ.

ವಿಶೇಷ ಸೂಚನೆ:-

- ಆಯಾ ಜಿಲ್ಲೆಯ ಪ್ರಾಂಶುಪಾಲರು ಮತ್ತು ಉಪನ್ಯಾಸಕರು ಪ್ರಶಸ್ತಿಗಾಗಿ ಪ್ರಸ್ತಾವನೆಯನ್ನು ಉಪ ನಿರ್ದೇಶಕರ ಕಛೇರಿಗೆ ಸಲ್ಲಿಸಲು ಕೊನೆಯ ದಿನಾಂಕ:23.08.2018 ಆಗಿರುತ್ತದೆ.
- ಜಿಲ್ಲಾ ಉಪ ನಿರ್ದೇಶಕರ ಹಂತದಲ್ಲಿ ಪಟ್ಟಿಯನ್ನು ಅಂತಿಮಗೊಳಿಸಬೇಕಾದ ದಿನಾಂಕ:25.08.2018 ಆಗಿರುತ್ತದೆ.
- **ಉಪ ನಿರ್ದೇಶಕರ ಹಂತದಲ್ಲಿ ಆಯ್ಕೆ ಮಾಡಿದ ಪಟ್ಟಿಯನ್ನು ಮೂಲ ಪ್ರಸ್ತಾವನೆಯೊಂದಿಗೆ ದಿನಾಂಕ: 28-08-2018 ರೊಳಗೆ ಅತಿ ಜರೂರಾಗಿ ಜಂಟಿ ನಿರ್ದೇಶಕರು(ಶೈಕ್ಷಣಿಕ), ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-12 ಇವರಿಗೆ ಖುದ್ದಾಗಿ ತಲುಪಿಸುವುದು. ವಿಳಂಬವಾಗಿ ಬಂದ ಪ್ರಸ್ತಾವನೆಗಳನ್ನು ಪರಿಗಣಿಸಲಾಗುವುದಿಲ್ಲ.**

ನಿರ್ದೇಶಕರ ಪರವಾಗಿ
ಪದವಿ ಪೂರ್ವ ಶಿಕ್ಷಣ ಇಲಾಖೆ

ಪ್ರತಿಗಳು:

1. ರಾಜ್ಯದ ಜಿಲ್ಲಾ ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಸರ್ಕಾರಿ/ಅನುದಾನಿತ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರುಗಳ ಗಮನಕ್ಕೆ ತರಲು-ಮುಂದಿನ ಕ್ರಮಕ್ಕಾಗಿ.
2. ಶಾಖಾಧಿಕಾರಿಗಳು, ಇ-ಆಡಳಿತ –ಅಂತರ್ಜಾಲದಲ್ಲಿ ಅಳವಡಿಸಲು.
3. ಕಛೇರಿ ಪ್ರತಿ.

ಕರ್ನಾಟಕ ಸರ್ಕಾರ
ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-12.
E-mail:Commissioner.pue@gmail.com. * Ph. No.23361857, 23361858* Fax-23361852

ಉತ್ತಮ ಪ್ರಾಚಾರ್ಯರ ಹಾಗೂ ಉತ್ತಮ ಉಪನ್ಯಾಸಕ ಪ್ರಶಸ್ತಿಗಳಿಗೆ ಪ್ರಸ್ತಾವನೆ

ಭಾವ ಚಿತ್ರ

| | | |
|---|---|---|
| 1. | ಪ್ರಾಚಾರ್ಯರ/ ಉಪನ್ಯಾಸಕರ ಹೆಸರು:<br>ಮೊಬೈಲ್ ಸಂಖ್ಯೆ:<br>ಇ-ಮೇಲ್ ಐಡಿ: | |
| 2 | ಹುದ್ದೆ | |
| 3 | ವಿದ್ಯಾರ್ಹತೆ | |
| 4 | ಜನ್ಮ ದಿನಾಂಕ | |
| 5 | ಗಂಡು/ಹೆಣ್ಣು | |
| 6 | ಸೇವೆ ಸಲ್ಲಿಸುತ್ತಿರುವ ಸಂಸ್ಥೆಯ ವಿಳಾಸ | |
| 7 | ಉಪನ್ಯಾಸಕರಾಗಿ ಸೇವೆಗೆ ಸೇರಿದ ದಿನಾಂಕ ಮತ್ತು ಪ್ರಸ್ತುತ ವೃಂದದಲ್ಲಿ ಸಲ್ಲಿಸಿರುವ ಒಟ್ಟು ಸೇವೆ (ದಿನಾಂಕ 31.03.2018 ರವರೆಗೆ) | |
| 8 | ಸೇವೆ ಸಲ್ಲಿಸುತ್ತಿರುವ ಬಗ್ಗೆ ನಿಯಂತ್ರಣಾಧಿಕಾರಿಗಳಿಂದ ಪಡೆದ ದೃಢೀಕರಣ ಪತ್ರವನ್ನು ಲಗತ್ತಿಸಿದೆಯೇ ? | ಹೌದು/ಇಲ್ಲ |

(ಚೆಕ್‌ಲಿಸ್ಟ್‌ನಂತೆ ಪ್ರತ್ಯೇಕವಾಗಿ ಮೂಲ ದಾಖಲೆ/ಮಾಹಿತಿಗಳನ್ನು ಲಗತ್ತಿಸಬೇಕು, ಒಮ್ಮೆ ಸಲ್ಲಿಸಿರುವ ಪ್ರಸ್ತಾವನೆಯನ್ನು ಯಾವುದೇ ಕಾರಣಕ್ಕೂ ಹಿಂತಿರುಗಿಸಲಾಗುವುದಿಲ್ಲ).

ಸ್ಥಳ :

ದಿನಾಂಕ:

ಪ್ರಾಚಾರ್ಯರ /ಉಪನ್ಯಾಸಕರ ಸಹಿ

## ಕಾಲೇಜಿನ ಮುಖ್ಯಸ್ಥರ ದೃಢೀಕರಣ

ಶ್ರೀ/ಶ್ರೀಮತಿ________________________________________ಈ ಕಾಲೇಜಿನಲ್ಲಿ/ಸಂಸ್ಥೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು ಪ್ರಸ್ತಾವನೆಯಲ್ಲಿ ಸಲ್ಲಿಸಿರುವ ವಿವರಗಳು ಸರಿಯಾಗಿರುತ್ತವೆಂದು ದೃಢೀಕರಿಸಿದೆ

ಪ್ರಾಚಾರ್ಯರ/ಶಿಕ್ಷಣ ಸಂಸ್ಥೆಯ ಮುಖ್ಯಸ್ಥ

## ಜಿಲ್ಲಾ ಸಮಿತಿ ದೃಢೀಕರಣ

ಶ್ರೀ/ಶೀಮತಿ ____________________________ ರವರು ಸರ್ಕಾರಿ/ಅನುದಾನಿತ ಪದವಿ ಪೂರ್ವ ಕಾಲೇಜಿನಲ್ಲಿ ________________ ಪ್ರಾಚಾರ್ಯರು/ಉಪನ್ಯಾಸಕರಾಗಿದ್ದು ______________________ ಕಾಲೇಜಿನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಇವರು ಉತ್ತಮ ಪ್ರಾಚಾರ್ಯರು/ ಉಪನ್ಯಾಸಕರ ಪ್ರಶಸ್ತಿಗಾಗಿ ಸಲ್ಲಿಸಿರುವ ಪ್ರಸ್ತಾವನೆಯನ್ನು ಪರಿಶೀಲಿಸಿದೆ ಸರಿಯಾಗಿವೆ ಎಂದು ದೃಢೀಕರಿಸದೆ. ಮತ್ತು ಪ್ರಶಸ್ತಿಗಾಗಿ ಶಿಫಾರಸ್ಸು ಮಾಡಿದೆ.

ಸ್ಥಳ:

ದಿನಾಂಕ: ಅಧ್ಯಕ್ಷರು

____________ ಜಿಲ್ಲಾ ಸಮಿತಿ